ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

**ಸಿಸಿ ನಂಬರ್ 1516/2023**

| | | | |
|---|---|---|---|
| ಸಾಕ್ಷಿಯ ಹೆಸರು | : ಮಂಜುನಾಥ | | ಸಿ.ಡಬ್ಲ್ಯು 3 |
| ತಂದೆಯ ಹೆಸರು | : ಅಂಚಣ್ಣ | | ಪಿ.ಡಬ್ಲ್ಯು 2 |
| ವಯಸ್ಸು | : 37 ವರ್ಷ | | |
| ಉದ್ಯೋಗ | : ಅಬಕಾರಿ ಪೇದೆ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕ:**23.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು 2019 ರಿಂದ ಇಲ್ಲಿಯವರೆಗೆ ತರೀಕೆರೆಯಲ್ಲಿ ಅಬಕಾರಿ ಪೇದೆ ಎಂದು ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 18.04.2023 ರಂದು ನಾನು ಚಾಸಾ-1 ರವರ ಜೊತೆಗೆ ಶಿವನಿ ಮಾರ್ಗದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-1 ರವರಿಗೆ ಶಿವನಿ ಗ್ರಾಮದಿಂದ ಅನುವನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಯಾವುದೋ ಆಸಾಮಿಯು ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದ ಮೇರೆಗೆ ಅದೇ ವಾಹನದಲ್ಲಿ ನಾವು ಮಾಹಿತಿ ಬಂದ ಸ್ಥಳದ ಕಡೆಗೆ ಹೊರಟೆವು. ಶಿವನಿ ವೃತ್ತದ ಬಳಿ ಚಾಸಾ-2 ರವರನ್ನು ಪಂಚರಾಗಿ ಕರೆದುಕೊಂಡೆವು. ನಾವು ಗಂಗಾದೇವಿ ಪ್ರೌಢಶಾಲೆಯ ಹತ್ತಿರ ಹೋಗುತ್ತಿರಬೇಕಾದರೆ ನ್ಯಾಯಾಲಯದ ಮುಂದಿರುವ ಆರೋಪಿಯೇ ವಾಹನ ಸಂಖ್ಯೆ:ಕೆಎ.06-ಇಎನ್.3531 ಶಿವನಿ ಕಡೆಯಿಂದ ಬಂದಿತು. ಅನುಮಾನದಿಂದ ತಡೆದು ನಿಲ್ಲಿಸಿ, ನೋಡಲಾಗಿ ವಾಹನದ ಬ್ಯಾಗಿನಲ್ಲಿ 90 ಎಂ.ಎಲ್.ನ 47 ರಾಜಾವಿಸ್ಕಿ ಸ್ಯಾಚೆಟುಗಳು ಕಂಡುಬಂದವು. ಅವುಗಳನ್ನು ಸಾಗಾಟ ಮಾಡಲು ಆರೋಪಿ ಬಳಿ ಯಾವುದೇ ರಹದಾರಿ ಇರಲಿಲ್ಲ. ಹೆಸರನ್ನು ಕೇಳಲಾಗಿ, ಆರೋಪಿ ತನ್ನ ಹೆಸರನ್ನು ಮಂಜಪ್ಪ ಎಂದು ತಿಳಿಸಿದನು. ಕಾರಣ ಚಾಸಾ-1 ರವರು ಚಾಸಾ-2 ರವರ ಸಮಕ್ಷಮ ಬೆಳಗ್ಗೆ 10.30 ರಿಂದ 11.30 ರ ಮಧ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ, ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡರು. ನಂತರ ಠಾಣೆಗೆ ಹಿಂದಿರುಗಿ ಚಾಸಾ-1 ರವರು ಪ್ರಕರಣವನ್ನು ದಾಖಲಿಸಿದ್ದಾರೆ. ನಾನು ಕೂಡ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಮು.ಮಾ.1 ನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ನಾವು ಇದ್ದ ಸ್ಥಳದಿಂದ ಮಾಹಿತಿ ಬಂದ ಸ್ಥಳಕ್ಕೆ ಹೋಗಲು 5 ರಿಂದ 10 ನಿಮಿಷ ಸಮಯ ಹಿಡಿಯಿತು. ನಾನು ಹೇಳಿದ ರಸ್ತೆ ಸಾಮಾನ್ಯವಾಗಿ ಜನಸಂದಣಿ ಇರುವ ರಸ್ತೆ ಎಂದರೆ ಸರಿಯಲ್ಲ,

ಯಾವಾಗಲೋ ಒಂದು ವಾಹನ ಬರುತ್ತದೆ. ಆ ದಿನ ಆರೋಪಿ ನಾನು ಮೇಲೆ ಹೇಳಿದ ವಾಹನದ ಮೂಲಕ ಯಾವುದೇ ಮದ್ಯವನ್ನು ಸಾಗಾಟ ಮಾಡಿರುವುದಿಲ್ಲ. ಚಾಸಾ-1 ರವರು ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಆರೋಪಿಯಿಂದ ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ, ಮುದ್ದೆಮಾಲಿಗೂ ಮತ್ತು ಆರೋಪಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಛೇರಿಯ ಅಂಕಿ-ಸಂಖ್ಯೆಗಳಿಗಾಗಿ ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**